# ಸ್ವರ್ಣವಲ್ಲೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಅಭಿಮತ

# ಆತ್ಮ ವಿಸ್ಮೃತಿ ಹೋಗಲಾಡಿಸುವವನು ಗುರು

ಪ್ರಜಾವಾಣಿ ವಾರ್ತೆ



ಶಿರಸಿಯ ಸ್ವರ್ಣವಲ್ಲೀ ಮಠದಲ್ಲಿ ನಡೆದ ಗುರುಪೂರ್ಣಿಮೆ ಕಾರ್ಯಕ್ರಮದಲ್ಲಿ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಮಾತನಾಡಿದರು. ಆನಂದಬೋಧೇಂದ್ರ ಸರಸ್ವತೀ ಸ್ವಾಮೀಜಿ, ಗಣಪತಿ ಭಟ್ ಹಾಸಣಗಿ, ರಾಮಚಂದ್ರ ಹೆಗಡೆ ಇದ್ದರು

ಶಿರಸಿ: ವ್ಯಕ್ತಿಯ ಮನದಲ್ಲಿ ಮೂಡುವ ಆತ್ಮ ವಿಸ್ಮೃತಿಯನ್ನು ಹೋಗಲಾಡಿಸಿ ಜೀವನ ದರ್ಶನ ನೀಡುವವನು ನಿಜವಾದ ಗುರು ಎಂದು ಸ್ವರ್ಣವಲ್ಲೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಸ್ವರ್ಣವಲ್ಲೀ ಮಠದಲ್ಲಿ ಗುರುಪೂರ್ಣಿಮೆ ಅಂಗವಾಗಿ ನಡೆದ ಧರ್ಮಸಭೆಯಲ್ಲಿ ಮಾತನಾಡಿದರು.

ಗುರು ಪೂರ್ಣಿಮೆ ಎಂದರೆ ಗುರು ಸ್ಮರಣೆಯ ಅದ್ಭುತ ದಿನವಾಗಿದೆ. ಅರಿವಿನ ಸಾಕಾರಮೂರ್ತಿಯಾಗಿರುವ ಗುರುವನ್ನು ನೆಚ್ಚಿದರೆ ಜೀವನ ಧನ್ಯತೆಯಾಗುತ್ತದೆ. ಜೀವನದಲ್ಲಿ ಗುರುವಿನ ಮಾರ್ಗದರ್ಶನದಲ್ಲಿಯೇ ಸಾಗಿದರೆ ಗುರಿ ಸಾಧನೆ ಸಾಧ್ಯವಾಗುತ್ತದೆ. ಹಾಗಾಗಿ ಚಿಕ್ಕ ವಯಸ್ಸಿನಲ್ಲೇ ಗುರುವನ್ನು ಆಶ್ರಯಿಸಬೇಕು ಎಂದು ಹೇಳಿದರು.

ಸ್ವರ್ಣವಲ್ಲೀ ಕಿರಿಯ ಯತಿ ಆನಂದಬೋಧೇಂದ್ರ ಸರಸ್ವತೀ ಸ್ವಾಮೀಜಿ ಮಾತನಾಡಿ, ಶಿಷ್ಯರಾದವರಿಗೆ ಆತ್ಮತತ್ವದ ಬೋಧನೆ ಮಾಡುವವನು ಗುರುವಾಗಿದ್ದು, ಶಿಷ್ಯರ ಏಳ್ಗೆಗೆ ಕಾರಣವಾಗುತ್ತಾನೆ. ಗುರು ಸೇವೆಯಿಂದ ಶಿಷ್ಯರಿಗೆ ಕಾಮನೆಗಳ ಜತೆ ಮೋಕ್ಷ ಪ್ರಾಪ್ತಿಯಾದರೆ ಸಾಧಕರಿಗೆ ಮೋಕ್ಷಪ್ರಾಪ್ತಿಯಾಗುತ್ತದೆ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಗುರುಸೇವೆಗೆ ಮುಂದಾಗಬೇಕು ಎಂದರು.

ಇದೇ ವೇಳೆ ತಾನಸೇನ್ ಪ್ರಶಸ್ತಿ ಪುರಸ್ಕೃತ ಗಾಯಕ ಗಣಪತಿ ಭಟ್ ಹಾಸಣಗಿ, ಶಿಲ್ಪಿ ರಾಮಚಂದ್ರ ಹೆಗಡೆ ಕೆಶಿನ್ಮನೆ ಹಾಗೂ ಸಾಧಕ ವಿದ್ಯಾರ್ಥಿ ಸುಘೋಷ ಜೋಶಿ ಅವರನ್ನು ಯತಿದ್ವಯರು ಸನ್ಮಾನಿಸಿ ಗೌರವಿಸಿದರು.

Scanned with OKEN Scanner